Sri S. SIVAPPA.—This Government has spent more than Rs. 6 lakhs over this Mysore–Maharashtra–Kerala Border Disputes Committee, for which Mr. Malimath is Chairman. Here is a case for which Government has spent Rs. 75,000 on a different Commission, for which also Mr. Malimath is the Chairman. I want to know, out of this sum of Rs. 6 lakhs and odd, how much Mr. Malimath has drawn in the form of T. A., D. A., salary and other services ?

Sri S. R. KANTHI.—He might have drawn T. A. and D. A. So far as I am aware, he has not taken any salary.

Mr. DEPUTY SPEAKER.—Next Question No. 555.

Duties entrusted to Village Panchayat Secretaries

137. Sri M. N. RAMANNA (Turuvekere) [On behalf of SRI G. T. GOVINDA REDDY (Madhugiri)].—

Will the Minister for Development and Co-operation be pleased to state :—

(*a*) the duties entrusted now to the Secretary, Village Panchayat ;

(*b*) whether it has come to their notice that most of the Secretaries have not written the account and as such the Jamabandi has stopped ?

A.—Sri P. M. NADGOUDA (Minister for Development and Co-operation).—

(*a*) *Vide* list placed on the Table of the House.*

(*b*) No.

ಶ್ರೀ ಎಂ. ಎನ್. ರಾಮಣ್ಣ.—ಪ್ರಶ್ನೆ 555 ಕೇಳುತ್ತೇನೆ.

† ಶ್ರೀ ಪಿ. ಎಂ. ನಾಡಗೌಡ.—ಉತ್ತರ ಅಚ್ಚಾಗಿದೆ.

ಶ್ರೀ ಎಸ್. ಶಿವಪ್ಪ.—ಮಾನ್ಯ ಶ್ರೀ ನಾಡಗೌಡರ ಬಗ್ಗೆ ಈ ಸಭೆಯಲ್ಲಿ ನಿನ್ನೆಯ ದಿವಸ ಒಂದು ಹಕ್ಕು ಬಾಧ್ಯತಾ ನಿರ್ಣಯದ ವಿಷಯದ ಮೇಲೆ ಮಾತನಾಡುತ್ತಾ ಮಾನ್ಯ ಸಚಿವರು ಈ ಸಭೆಯಲ್ಲಿ ಹಾಗೆ ಮಾತನಾಡಲಿಲ್ಲ, ಬೇರೆ ಸಭೆಯಲ್ಲಿ ಮಾತನಾಡಿದ್ದಾರೆ ಎಂದು ತಾವು ಹೇಳಿದಿರಿ. ಆದರೆ ಅದು ಈ ಸಭೆಗೆ ಸಂಬಂಧಪಟ್ಟದ್ದು, ಈ ಸಭೆಯ ಘನತೆ ಗಾಂಭೀರ್ಯ ಕೆಳಕ್ಕೆ ಇಳಿಸತಕ್ಕಂಥಾದ್ದು ಅವಹೇಳನ ಮಾಡತಕ್ಕಂಥಾದ್ದು ಎಂದು ಚರ್ಚೆ ಮಾಡುತ್ತಾ ಇರುವಾಗ್ಗೆ ನಾಡಗೌಡರ ಬಗ್ಗೆ ತಾವು ರೂಲಿಂಗ್ ಕೊಟ್ಟಿದ್ದೀರಿ. ತಾವು ರೂಲಿಂಗ್ ಕೊಟ್ಟ ಮೇರೆ ಈ ಸಭೆಗೆ ಈಗ ಅವರು ಪ್ರಥಮ ಬಾರಿ ಬಂದಿದ್ದಾರೆ. ಅವರು ಈ ಸಭೆಯ ಕಾರ್ಯಕರಾಪದಲ್ಲಿ ಭಾಗ ವಹಿಸುವುದಕ್ಕೆ ಮುಂಚೆ ಯಾವ ಸಭೆಯ ಕಾರ್ಯಕರಾಪವನ್ನು ಅವರು ಅವಹೇಳನ ಮಾಡಿದ್ದಾರೋ ಅಂಥ ಈ ಸಭೆಯ ಮುಂದೆ ಅವರು ಪಶ್ಚಾತ್ತಾಪ ಪಟ್ಟು ಹಾಗು ಹಕ್ಕು ಬಾಧ್ಯತಾ ನಿರ್ಣಯದಲ್ಲಿ ಹೇಳಿರುವ ಹಾಗೆ ಅವರು ತಮ್ಮ ತಪ್ಪನ್ನು ಒಪ್ಪಿಕೊಂಡು ಆಮೇಲೆ ಅವರು ಕಾರ್ಯಕರಾಪದಲ್ಲಿ ಭಾಗವಹಿಸಲು ಅವಕಾಶವಿದೆ. ಮಾನ್ಯ ಮಂತ್ರಿಗಳು ಬೇರೆ ಸಭೆಯಲ್ಲಿ ಈ ಸಭೆಯನ್ನು ಅವಹೇಳನ ಮಾಡುವಂಥ ಮಾತುಗಳನ್ನಾಡಿ

* Copy placed in the Mysore Legislature Library *Vide* No. 18. dated 8th March 1968.

ತಾವು ಇದರ ಬಗ್ಗೆ ರೂಲಿಂಗ್ ಕೊಟ್ಟ ಮೇಲೆ ಮೊದಲ ಬಾರಿಗೆ ಈ ಸಭೆಗೆ ಬಂದಿದ್ದಾರೆ ಅವರು ಈ ಸಭೆಯ ಸದಸ್ಯರಲ್ಲದಿದ್ದರೂ ಈ ದೇಶದ ಮಂತ್ರಿಗಳಾಗಿ ಇಲ್ಲಿಗೆ ಬಂದಿದ್ದಾರೆ. ಅವರನ್ನು ಕೇಳಲು ನನಗೆ ಹಕ್ಕಿದೆ. ಈ ಸಭೆಯ ಘನತೆಯನ್ನು ಕಾಪಾಡಲು ನಾನು ಅವರನ್ನು ಕೇಳುತ್ತಿದ್ದೇನೆ. ಅವರು ಈ ಸಭೆಯ ಬಗ್ಗೆ ಅವಹೇಳನ ಮಾಡುವಂಥ ಮಾತುಗಳನ್ನು ಬೇರೊಂದು ಸಭೆಯಲ್ಲಿ ಹೇಳಿರುವುದಕ್ಕೆ ಪಶ್ಚಾತ್ತಾಪವನ್ನು ವ್ಯಕ್ತ ಮಾಡಬೇಕು ಅಥವಾ ಬೇರೆ ರೀತಿಯಲ್ಲಿ ಈ ಸಭೆಯ ಗೌರವವನ್ನು ಗಾಳಿ ಪಾಲು ಮಾಡುವುದಕ್ಕೆ ಏನು ಪ್ರಯತ್ನ ಮಾಡಿದ್ದಾರೆ ಆ ಬಗ್ಗೆ ಅವರು ಈ ಮಾನ್ಯ ಸಭೆಗೆ ಒಂದು ಹೇಳಿಕೆಯನ್ನು ಕೊಡಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ.

Sri K. V. SHANKARA GOWDA.—Is it a point of order, Sir ? There is no room for making statement during Question Hour.

Mr. DEPUTY SPEAKER.—There is no point of order. Many hon. members advanced their arguments and I have heard them all and after hearing all the members, I have given the ruling ; It is over.

Sri S. SIVAPPA.—I am not questioning your ruling. But this is the only opportunity for Sri Nadgouda to express himself. Let him say something.

Sri H. SIDDAVEERAPPA.—Sir, we will take it after Question hour is over. You will kindly permit us.

ಶ್ರೀ ಎಂ. ಎನ್. ರಾಮಣ್ಣ—ತಾವು ಕೊಟ್ಟಿರತಕ್ಕ ಪಟ್ಟಿಯಲ್ಲಿ ಸುಮಾರು 20 ಕೆಲಸ ಕಾರ್ಯಗಳನ್ನು ಪಂಚಾಯಿತಿ ಸೆಕ್ರೆಟರಿಗಳು ಮಾಡಬೇಕೆಂದು ಹೇಳಿದ್ದೀರಿ. ಇದರ ಜೊತೆಗೆ ಪಂಚಾಯಿತಿ ಕಾರ್ಯದರ್ಶಿಗಳಿಗೆ ರೆವೆನ್ಯೂ ಇಲಾಖೆಯ ಲೆಕ್ಕಪತ್ರಗಳನ್ನೂ ಕೊಟ್ಟಿರುವುದರಿಂದ ಪಂಚಾಯಿತಿಯ ಕೆಲಸಕಾರ್ಯಗಳು ಸ್ವಲ್ಪಮಟ್ಟಿಗೆ ಸಮರ್ಪಕವಾಗಿ ನಡೆಯುತ್ತಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ಎನ್. ರಾಮಣ್ಣ.—ಅನೇಕ ಪಂಚಾಯಿತಿಗಳಲ್ಲಿ ಆಡಿಟ್ ರಿಪೋರ್ಟ್ ಪ್ರಕಾರ ಹಣದ ದುರುಪಯೋಗವಾಗಿದೆ ಮತ್ತು ಪಂಚಾಯಿತಿ ಲೆಕ್ಕಪತ್ರಗಳನ್ನು ಬರೆದಿಲ್ಲ ಎಂದು ಅನೇಕ ಆಡಿಟ್ ರಿಪೋರ್ಟ್‌ಗಳಲ್ಲಿ ಬರೆದಿರುವುದರಿಂದ ಸರ್ಕಾರಕ್ಕೆ ಹೆಚ್ಚು ವೆಚ್ಚವಾಗುತ್ತಿಲ್ಲವೆ ?

ಶ್ರೀ ಪಿ. ಎಂ. ನಾಡಗೌಡ.—ಅಂಥ ಅಡಚಣೆ ಏನಾದರೂ ಬಂದಲ್ಲಿ ತಾಲ್ಲೂಕಿಗೆ ಒಬ್ಬ ಪಂಚಾಯಿತಿ ಅಧಿಕಾರಿ ಇದ್ದಾರೆ. ಅವರ ಮೇಲೆ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಜಮಾಬಂದಿಗೂ ಮತ್ತು ಪಂಚಾಯಿತಿ ಲೆಕ್ಕಕ್ಕೂ ಸಂಬಂಧವೇನು ? ಪಂಚಾಯಿತಿ ಕಾರ್ಯದರ್ಶಿ ರೆವಿನ್ಯೂ ಲೆಕ್ಕಗಳನ್ನು ಬರೆಯುವುದು ಹೇಗೆ ?

ಶ್ರೀ ಪಿ. ಎಂ ನಾಡಗೌಡ.—ಈ ಭಾಗದಲ್ಲಿ ವಿಲೇಜ್ ಅಕೌಂಟೆಂಟ್ ಕಮ್ ಪಂಚಾಯಿತಿ ಸೆಕ್ರೆಟರಿ ಎಂದು ನೇಮಕ ಮಾಡಿದ್ದಾರೆ. ವಿಲೇಜ್ ಅಕೌಂಟೆಂಟ್ ದರ್ಜೆಯೊಳಗೆ ರೆವೆನ್ಯೂ ಖಾತೆಗೆ ಸಂಬಂಧಪಟ್ಟಿರುತ್ತಾನೆ, ಪಂಚಾಯಿತಿ ಕೆಲಸಗಳ ಸಂಬಂಧದಲ್ಲಿ ತಾಲ್ಲೂಕು ಬೋರ್ಡ್ ಚೀಫ್ ಎಕ್ಸಿಕ್ಯೂಟಿವ್ ಆಫೀಸರಿಗೆ ಸಂಬಂಧಪಟ್ಟಿರುತ್ತಾನೆ. ಆ ದೃಷ್ಟಿಯಿಂದ ಎಷ್ಟೂ ಖಾತೆಗೆ ಅವರು ಸಂಬಂಧವಿದ್ದಾರೆ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಪಂಚಾಯಿತಿ ಕಾರ್ಯದರ್ಶಿಗೂ ಜಮಾಬಂದಿಗೂ ಏನು ಸಂಬಂಧ ಸ್ವಾಮಿ ?

ಶ್ರೀ ಪಿ. ಎಂ. ನಾಡಗೌಡ.—ವಿಲೇಜ್ ಅಕೌಂಟೆಂಟ್ ಮತ್ತು ಪಂಚಾಯಿತಿ ಸೆಕ್ರೆಟರಿ ಒಬ್ಬರೆ ಇರುವುದರಿಂದ ಸಂಬಂಧವಿದೆ.

ಶ್ರೀ ಬಾಪುಗೌಡ.—ಮೈಸೂರು ರಾಜ್ಯದಲ್ಲಿ ಪಂಚಾಯಿತಿ ಸೆಕ್ರೆಟರಿಗಳು ಇದ್ದಾರೆಂದು ಹೇಳಿದಿರಿ. ಪಂಚಾಯಿತಿ ಸೆಕ್ರೆಟರಿಗಳು ಈಗ ಎಲ್ಲ ಕಡೆಯೂ ಇದ್ದಾರೆಯೇ ?

ಶ್ರೀ ಪಿ. ಎಂ. ನಾಡಗೌಡ.—ಬೇರೆ ಪ್ರಶ್ನೆ ಕೇಳಿದರೆ ಹೇಳಬಹುದು.

ಶ್ರಿ ಎಂ ಎನ್. ರಾಮಣ್ಣ.—ಪಂಚಾಯಿತಿ ಮತ್ತು ರೆವೆನ್ಯೂ ಎರಡು ಖಾತೆಯ ಕೆಲಸವನ್ನೂ ಅವರಿಗೆ ವಹಿಸಿರುವುದರಿಂದ ಕೆಲಸ ಜಾಸ್ತಿಯಾಗಿ ಎರಡೂ ಕಡೆಯೂ ಕೆಲಸ ಆಗುತ್ತಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಪಂಚಾಯಿತಿ ಸೆಕ್ರೆಟರಿ ಮತ್ತು ವಿಲೇಜ್ ಅಕೌಂಟೆಂಟ್ ಕೂಡಿರಬೇಕೋ ಅಥವಾ ಬೇರೆ ಇರಬೇಕೋ ಎನ್ನುವ ಪ್ರಶ್ನೆ ಮೈಸೂರು ರಾಜ್ಯದ ಮಂತ್ರಿ ಮಂಡಲದ ಉಪಸಮಿತಿಯ ಮುಂದೆ ಇದೆ. ಅವರು ವಿಚಾರ ಮಾಡುತ್ತಿದ್ದಾರೆ. ಅವರಿಂದ ವರದಿ ಬಂದ ಮೇಲೆ ಯಾವರೀತಿ ಮಾಡಬೇಕು ಎನ್ನುವುದನ್ನು ಸರ್ಕಾರ ಯೋಚನೆ ಮಾಡುತ್ತದೆ.

ಶ್ರೀ ಎಂ. ಎನ್. ರಾಮಣ್ಣ.—ಬಾಂಬೆ ಕರ್ಣಾಟಕದಲ್ಲಿರುವಂತೆ ರೆವೆನ್ಯೂ ಮತ್ತು ಪಂಚಾಯಿತಿ ಕೆಲಸಗಳಿಗೆ ಬೇರೆಬೇರೆ ವ್ಯವಸ್ಥೆಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಆ ಪ್ರಶ್ನೆ ಸರಕಾರ ವಿಚಾರಮಾಡಲಕ್ಕೆ ಹತ್ತಿದೆ.

Sri H. SIDDAVEERAPPA.—The Secretary shall be responsible for the prompt recovery of the taxes and other dues to the panchayat. It is one of the duties enjoined. May I know how many Secretaries have discharged their duties promptly so far as this duty is concerned ?

ಶ್ರೀ ಪಿ. ಎಂ. ನಾಡಗೌಡ.—ಯಾರೂ ಸರಿಯಾಗಿ ಕೆಲಸಮಾಡಿಲ್ಲ ಎಂದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಈಗ ಇರುವ ಸೆಕ್ರೆಟರಿ ಪಂಚಾಯಿತಿ ಟ್ಯಾಕ್ಸ್ ಮತ್ತು ಬಾಕಿ ತೆರಿಗೆಗಳು ಇವೆಲ್ಲವನ್ನೂ ವಸೂಲುಮಾಡಬೇಕಾಗಿರುವುದರಿಂದ ವಸೂಲು ಕ್ರಮ ಸಮರ್ಪಕವಾಗಿಲ್ಲ ಎಂಬುದರ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಪಿ. ಎಂ. ನಾಡಗೌಡ.—ಈಗ ಸಾಧಾರಣವಾಗಿ ಸರಿಯಾಗಿ ಮಾಡುತ್ತಿದ್ದಾರೆಂದು ಹೇಳಬಹುದು.

ಶ್ರೀ ಎಚ್. ಸಿದ್ದವೀರಪ್ಪ.—ಕಾರ್ಯದರ್ಶಿಗಳಿಗೆ ವಹಿಸಿರುವ ಕೆಲಸದ ಬಗ್ಗೆ ಈ ರೀತಿ ತಿಳಿಸಿದೆ. The Secretary shall periodically inspect burning and burial grounds and see these are kept in sanitary conditions. ಯಾರನ್ನು ಬರಿ ಮಾಡುವುದು, ಯಾರನ್ನು ಬರ್ನ್ ಮಾಡುವುದು ? ಈ ಕೆಲಸ ಅವರಿಗೇಕೆ ಕೊಟ್ಟಿದೆ ?

ಶ್ರಿ ಪಿ. ಎಂ. ನಾಡಗೌಡ. —ಮಾನ್ಯ ಸದಸ್ಯರೇ ಅದನ್ನು ಊಹೆಮಾಡಬಹುದು ?

ಶ್ರೀ ಎನ್. ಎ. ಚನ್ನೇಗೌಡ.—ಸರಕಾರಿ ವಿಲೇಜ್ ಅಕೌಂಟೆಂಟ್ ಆಗಿ ಈ ಸೆಕ್ರೆಟರಿಗಳು ಕೆಲಸಮಾಡುತ್ತಿರುವುದರಿಂದ ಪಹಣಿಯನ್ನು ಸರಿಯಾಗಿ ಅವರು ಬರೆಯುತ್ತಿಲ್ಲ, ಇದರಿಂದ ರೈತರಿಗೆ ತೊಂದರೆಯಾಗಿದೆ ಎಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಅವನ್ನು ರೆವಿನ್ಯೂ ಮಂತ್ರಿಗಳಲ್ಲಿ ಕೇಳಬೇಕು, ಅದರ ವರದಿ ನಮಗೆ ಬರುವುದಿಲ್ಲ.

ಶ್ರೀ ಎನ್. ಹುಚ್ಚುಮಾಸ್ತಿಗೌಡ.—ಮೊನ್ನೆ ಇದೇ ಸಂಬಂಧವಾದ ಪ್ರಶ್ನೆಗೆ ಉತ್ತರಕೊಡುತ್ತಾ ಮಾನ್ಯ ಮಂತ್ರಿಗಳು ಪಂಚಾಯಿತಿ ಕಾರ್ಯದರ್ಶಿಗಳಿಗೆ 3 ಕೆಲಸ ವಹಿಸುತ್ತೇವೆ, ಸಹಕಾರ ಸಂಘದ ಕಾರ್ಯದರ್ಶಿ ಕೆಲಸ ವಿಲೇಜ್ ಅಕೌಂಟೆಂಟ್ ಕೆಲಸ ಮತ್ತು ಪಂಚಾಯಿತಿ ಸೆಕ್ರೆಟರಿ ಕೆಲಸ—ಈ ಮೂರು ಜವಾಬ್ದಾರಿ ಅವರಿಗೆ ವಹಿಸಬೇಕು ಎಂದು ಯೋಚನೆಮಾಡುತ್ತಿದ್ದೇವೆ, ಇದಕ್ಕಾಗಿ ಕ್ಯಾಬಿನೆಟ್ಟಿನಲ್ಲಿ ಒಂದು ಸಬ್ ಕಮಿಟಿ ಕೂಡ ಮಾಡಿದ್ದೇವೆ ಎಂದು ಹೇಳಿದರು. ಈಗ ಅವರಿಗೆ ಎರಡು ಹುದ್ದೆಗಳ ಕೆಲಸ ವಹಿಸಿರುವಾಗಲೇ ಅಸಮರ್ಪಕವಾದ ಕೆಲಸ ಮಾಡುತ್ತಿರುವಾಗ ಇನ್ನೊಂದು ಕೆಲಸ ಅವರಿಗೆ ವಹಿಸುವ ಯೋಚನೆ ಇದ್ದರೆ ಇದಕ್ಕೆ ಅಧಿಕಾರಿ ದರ್ಜೆ ಬದಲಾಯಿಸಿ ದಕ್ಷರೂ ಮತ್ತು ಯೋಗ್ಯರೂ ಆದವರನ್ನು ನೇಮಕಮಾಡುವುದನ್ನು ಯೋಚನೆಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಆ ಮೂರು ಸಂಸ್ಥೆಗಳಿಗೂ ಒಬ್ಬರೇ ಇರಬೇಕೇ ಅಥವಾ ಬೇರೆ ಬೇರೆಯವರಿರಬೇಕೇ ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ ಎಂಬುದನ್ನು ವಿಚಾರ ಮಾಡುತ್ತಿದ್ದೇವೆ.

ಶ್ರೀ ಜಿ. ರಾಮೇಗೌಡ.—ಈ ಸೆಕ್ರೆಟರಿಗಳ ದಿನವಹಿ ಕೆಲಸ ಉಸ್ತುವಾರಿ ಮಾಡುವವರು ಯಾರು ! ಅವರ ತಿಂಗಳ ಸಂಬಳ ಡ್ರಾ ಮಾಡುವವರು ಯಾರು ?

ಶ್ರೀ ಪಿ. ಎಂ. ನಾಡಗೌಡ.—ಅವರ ಪಗಾರ ಡ್ರಾ ಮಾಡುವವರು ತಾಲ್ಲೂಕು ಬೋರ್ಡಿನ ಚೀಫ್ ಎಗ್ಜಿಕ್ಯುಟಿವ್ ಆಫೀಸರು. ಅವರ ಕೆಲಸಕಾರ್ಯ ನೋಡುವವರು ಪಂಚಾಯತಿ ಆಫೀಸರು. ಚೀಫ್ ಎಗ್ಜಿಕ್ಯುಟಿವ್ ಆಫೀಸರು, ಬಿ.ಡಿ.ಓ. ಸಹ ಸೂಪರ್‌ವೈಜ್ ಮಾಡುತ್ತಾರೆ.

ಶ್ರೀ ಬಿ. ಎಂ. ಇದಿನಬ್ಬ.—ಈ ಸೆಕ್ರೆಟರಿಗಳ ನಂಬಳ ಕೊಡುವವರು ತಾಸಿಲ್ದಾರರು ಎಂಬುದು ಗೊತ್ತಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ತಾಸಿಲ್ದಾರರು ಎರಡು ಕ್ಯಪಾಸಿಟಿಯಲ್ಲಿ ಕೆಲಸಮಾಡುವರು, ಅವರು ಚೀಫ್ ಆಫೀಸರಾಗಿಯೂ ಕೂಡ ಕೆಲಸಮಾಡುತ್ತಾರೆ.

ಶ್ರೀ ಬಿ. ಎಂ. ಇದಿನಬ್ಬ.—ಸೆಕ್ರೆಟರಿ ಸರಿಯಾಗಿ ಕೆಲಸಮಾಡುವುದಿಲ್ಲ, ಕಾರಣ ನಂಬಳ ಕಡಮೆ ಎಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಕೆಲವರು ಅದನ್ನು ಹೇಳಿದ್ದಾರೆ.

ಶ್ರೀ ಕೆ. ಎಚ್. ತಮ್ಮಯ್ಯ.—ಒಬ್ಬ ಕಾರ್ಯದರ್ಶಿಯು ಒಂದು ಪಂಚಾಯತಿಯಲ್ಲಿ ಹಣ ತಿಂದುಹಾಕಿ ಸಸ್ಪೆನ್‌ಷನ್ನಿನಲ್ಲರುವಾಗ ಅತನನ್ನು ಇನ್ನೊಂದು ಪಂಚಾಯತಿಗೆ ನೇಮಕ ಮಾಡಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಬಂದಿಲ್ಲ.

Land leased for construction of a Petrol Pump

138. Sri K. H. RANGANATH (Mudigere).—

Will the Minister for Public Works be pleased to state : —

(*a*) whether the Government has proposed to lease land for the construction of a Petrol Pump within the premises of Legislators' Home or in a place abutting the same ;

(*b*) the person or persons or company to whom the land is proposed to be leased ;

(*c*) the terms of the lease and the rent chargeable for the same ;

(*d*) whether the opinion of the concerned authorities is obtained ?

A.—Sri VEERENDRA PATIL (Minister for Public Works).—

(*a*) No.

(*b*), (*c*) and (*d*) Does not arise in view of reply to clause (*a*) above.

ಶ್ರೀ ಕೆ. ಎಚ್. ರಂಗನಾಥ್.—ಇಲ್ಲವೆಂದು ಉತ್ತರ ಕೊಡಲಾಗಿದೆ. ಅದರ ಅರ್ಥ ಇಂದಿಲ್ಲ ಎಂತಲೇ ಅಥವಾ ಮುಂದೆ ಕೊಡುವ ಯೋಚನೆ ಇದೆಯೇ ?

† ಶ್ರೀ ವೀರೇಂದ್ರ ಪಾಟೀಲ್.—ನಮ್ಮ ಮುಂದೆ ಯಾವ ಪ್ರಪೋಸಲ್ಲೂ ಇಲ್ಲ.

ಶ್ರೀ ಕೆ. ರಾಜಯ್ಯಶೆಟ್ಟಿ.—ಪೆಟ್ರೋಲ್ ಬಂಕ್‌ಗೆ ಸ್ಪೇಟು ಕೊಡಿ ಎಂದು ಯಾರಾದರೂ ಅಪಿಕೇಷನ್ ಕೊಟ್ಟಿದ್ದರೇ ?

ಶ್ರೀ ವೀರೇಂದ್ರ ಪಾಟೀಲ್.—ಐ.ಓ.ಸಿ. ಅವರು ಅಪ್ಲಿಕೇಷನ್ ಕೊಟ್ಟಿದ್ದರಂತೆ ಚೀಫ್ ಇಂಜಿನಿಯರು ಆಗುವುದಿಲ್ಲ ಎಂದು ಹೇಳಿದ್ದರಂತೆ ಅದಕ್ಕೇ ಆ ಪ್ರಪೋಸಲ್ ನಮ್ಮ ಮುಂದೆ ಬರಲಿಲ್ಲ.

Sri C. K. RAJAIAH SHETTY.— Is it to I. O. C. or any other agency ?

Sri VEERENDRA PATIL.—To I. O. C.